O.S. 262/2012
P.W.3

**ಸಾಕ್ಷಿಯನ್ನು ದಿನಾಂಕಃ 01-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ನನಗೆ ವಯಸ್ಸಾದ ಕಾರಣ ನಾನು ಹೊಲಕ್ಕೆ ಹೋಗುವುದಿಲ್ಲ ಎಂದರೆ ಸರಿ. ನಾನು ಮನೆಯಲ್ಲಿಯೇ ಇರುತ್ತೇನೆ ಎಂದರೆ ಸರಿ. ಈಗ 2 - 3 ತಿಂಗಳ ಹಿಂದೆ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ಹಾಲಪ್ಪ ಖರೀದಿ ಮಾಡಿದ ಜಮೀನಿನ ಸರ್ವೇ ನಂ. 106 ಇರುತ್ತದೆ. ಅದರ ಪಹಣಿ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿ. ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿ ನೋಡಿರುವುದಿಲ್ಲ. ಸರ್ವೇ ನಂ. 106 ರ ಪಶ್ಚಿಮ ದಿಕ್ಕಿಗೆ ನನ್ನ ಹೊಲ ಇರುವುದು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ. 106 ರ ಪೂರ್ವಕ್ಕೆ ಪೂರ್ವದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸುತ್ತ ಮುತ್ತಲು ನನ್ನ ಹೊಲ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗಲೂ ಹಾಲಪ್ಪನ ಸ್ವಾಧೀನದಲ್ಲಿರುವುದು.

ಹಾಲಪ್ಪನಿಗೆ ಆರಾಮವಿಲ್ಲದ ಕಾರಣ ಈಗ ಹೊಲಕ್ಕೆ ಹೋಗುವುದಿಲ್ಲ. ಕಳೆದ 7-8 ವರ್ಷಗಳಿಂದ ಹಾಲಪ್ಪನಿಗೆ ಆರಾಮ ಇರುವುದಿಲ್ಲ. ನನಗೆ ವಯಸ್ಸಾದ ಕಾರಣ ನೆನಪಿನ ಶಕ್ತಿ ಕಮ್ಮಿಯಾಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ರೂ.800/-ಕ್ಕೆ ಖರೀದಿಸಿದ್ದನು. ಹಾಲಪ್ಪನ ಮಗಳೊಂದಿಗೆ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಆಕೆಯ ಮುಲಾಜಿಗೆ ಒಳಗಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಲಪ್ಪ ಎಂದಿಗೂ ಸರ್ವೆ ನಂ. 106 ಜಮೀನಿನ ಸ್ವಾಧೀನ ಇರಲಿಲ್ಲ ಮತ್ತು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಹಾಲಪ್ಪನಿಗೆ ಸರ್ವೆ ನಂ. 106 ರ ಜಮೀನು ಕೊಟ್ಟಿರುವರು. ದಾವಾ ಸ್ವತ್ತು ಪ್ರತಿವಾದಿಯರ ಸ್ವಾಧೀನದಲ್ಲಿರುವುದು ಎಂದರೆ ಸರಿಯಲ್ಲ. ಹಾಲಪ್ಪ ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿರುವನು ಎಂದು ನನಗೆ ಹೇಳಲು ನಿಖರವಾಗಿ ಬರುವುದಿಲ್ಲ, ಕಾರಣ ನನಗೆ ನೆನಪಿರುವುದಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

01.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**